# ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# NDCPS FAMILY PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.

ಸಂಖ್ಯೆ ಎನ್‌ಡಿಸಿಪಿಎಸ್‌ಎಫ್‌ಪಿಜಿಟಿ/ಎಫ್-6/2021-22/38-44 ದಿನಾಂಕ: 16 APR 2021
ಲಗತ್ತು: 1ಸಿಡಿ

ಗೆ,

1. ನಿರ್ದೇಶಕರು(ವಾಣಿಜ್ಯ),
   ಪಿಸಿಕೆಎಲ್.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ),
   ಬೆವಿಕಂ.
3. ಮುಖ್ಯ ಆರ್ಥಿಕ ಅಧಿಕಾರಿ,
   ಚಾವಿಸನಿ/ಹುವಿಕಂ/ಗುವಿಕಂ/ಮವಿಕಂ.
4. ಆರ್ಥಿಕ ಸಲಹೆಗಾರರು(ಎನ್‌ಡಿಸಿಪಿಎಸ್),
   ಕವಿಪ್ರನಿನಿ.

ಮಾನ್ಯರೇ,

ವಿಷಯ: ಎನ್‌ಡಿಸಿಪಿಎಸ್ ನೌಕರರ ಉಪದಾನ ಮತ್ತು ಕುಟುಂಬ ಪಿಂಚಣಿ ಹೊಣೆಯನ್ನು (Liability) ಕಂಡು ಹಿಡಿಯಲು ಪ್ರಾತ್ಯಕ್ಷಿಕ ಮೌಲ್ಯಮಾಪನ (Actuarial Valuation) ಮಾಡಿಸುವ ಕುರಿತು.

ಉಲ್ಲೇಖ: ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2020-21 ದಿನಾಂಕ 25.11.2020.

*******

1. ಉಲ್ಲೇಖದಲ್ಲಿನ ನಿಗಮದ ಆದೇಶದಲ್ಲಿ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ/ಎಸ್ಕಾಂಗಳ ನೌಕರರಿಗೆ/ನೌಕರರ ಅವಲಂಬಿತರಿಗೆ, ದಿನಾಂಕ 01.04.2018 ರಿಂದ ಜಾರಿಗೆ ಬರುವಂತೆ ನಿವೃತ್ತಿ/ ಮರಣ ಉಪದಾನ ಮತ್ತು ಕುಟುಂಬ ಪಿಂಚಣಿಯನ್ನು ವಿಸ್ತರಿಸಿ, ಉಪದಾನ ಮತ್ತು ಪಿಂಚಣಿ ಪಾವತಿಗಾಗಿ ಎನ್‌ಡಿಸಿಪಿಎಸ್ ಉಪದಾನ ಟ್ರಸ್ಟ್ ಮತ್ತು ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಟ್ರಸ್ಟ್‌ಗಳು ರಚಿತಗೊಂಡಿರುವ ಹಿನ್ನೆಲೆಯಲ್ಲಿ, ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿರವರಿಗೆ ಈ ಕೆಳಕಂಡಂತೆ ಅಧಿಕಾರವನ್ನು ನೀಡಲಾಗಿದೆ.

   ಅ) ಎನ್‌ಡಿಸಿಪಿಎಸ್ ಉಪದಾನ ನಿಧಿ ಮತ್ತು ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ನಿಧಿಯ ನಿರ್ವಹಣೆಯನ್ನು ಹಾಲಿ ಇರುವ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್ ಶಾಖೆಗೆ ವಹಿಸುವ ಬಗ್ಗೆ.

   ಆ) ಎನ್‌ಡಿಸಿಪಿಎಸ್ ಉಪದಾನ ಟ್ರಸ್ಟ್ ಮತ್ತು ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಟ್ರಸ್ಟ್‌ಗಳ ರಚನೆಗೆ ಸಲಹೆಗಾರರ(Consultants)ಗಳ ಸೇವೆಯನ್ನು ಪಡೆಯುವುದು ಮತ್ತು ಇದಕ್ಕೆ ಸಂಬಂಧಿಸಿದ ಎಲ್ಲಾ ವೆಚ್ಚಗಳನ್ನು ಮೊದಲಿಗೆ ಕವಿಪ್ರನಿನಿಯೇ ಭರಿಸಿ ತದನಂತರ, ವಿಸಕಂಗಳು ಸೂಕ್ತ ರೀತಿಯಲ್ಲಿ ಹಂಚಿಕೆ ಮೂಲಕ ಭರಿಸುವ ಬಗ್ಗೆ.

   ಇ) ಎನ್‌ಡಿಸಿಪಿಎಸ್ ನೌಕರರ ಉಪದಾನ ಮತ್ತು ಕುಟುಂಬ ಪಿಂಚಣಿ ಹೊಣೆಯನ್ನು (Liability) ಕಂಡುಹಿಡಿಯಲು ಪ್ರಾತ್ಯಕ್ಷಿಕ ಮೌಲ್ಯಮಾಪನ (Actuarial Valuation) ಮಾಡಿಸಲು ಹಾಗೂ ಸದರಿ ವರದಿಯನ್ನಾಧರಿಸಿ-

i. ನಿಗಮ ಮತ್ತು ಎಸ್ಕಾಂಗಳಿಂದ ನಿಗದಿತ ದಿನಾಂಕದಲ್ಲಿರುವಂತೆ ಮೂಲಧನ ನಿಧಿ (Corpus Fund) ಗಾಗಿ ಬೇಕಾದ ಮೊತ್ತವನ್ನು ಒಂದೇ ಗಂಟಿನಲ್ಲಿ/ ಮುಂಗಡವಾಗಿ ಸ್ವೀಕರಿಸುವ ಬಗ್ಗೆ.

ii. ನಿಗಮ ಮತ್ತು ಎಸ್ಕಾಂಗಳಿಂದ ಸ್ವೀಕೃತವಾಗುವ ಉಪದಾನ ಮತ್ತು ಕುಟುಂಬ ಪಿಂಚಣಿಯ ವಾರ್ಷಿಕ ವಂತಿಗೆ ದರವನ್ನು ನಿಗದಿಗೊಳಿಸುವ ಬಗ್ಗೆ.

iii. ನಿಗಮ ಮತ್ತು ಎಸ್ಕಾಂಗಳಿಂದ ನಿಗದಿತ ದಿನಾಂಕದಂದು ಪ್ರತಿ ಮಾಹೆಯ ವಂತಿಗೆ ಮೊತ್ತವನ್ನು ಸ್ವೀಕರಿಸುವ ಬಗ್ಗೆ.

2. ಮೇಲಿನ ಕಂಡಿಕೆಯಲ್ಲಿ ತಿಳಿಸಿದಂತೆ, ಲೆಕ್ಕಪತ್ರ ಗುಣಮಟ್ಟ (Accounting Standard) IND AS 19 ಅನುಸಾರ ದಿನಾಂಕ 31.03.2018, 31.03.2019, 31.03.2020 ಹಾಗೂ 31.03.2021ರಲ್ಲಿರುವಂತೆ ಎನ್‌ಡಿಸಿಪಿಎಸ್ ನೌಕರರ ಉಪದಾನ ಮತ್ತು ಕುಟುಂಬ ಪಿಂಚಣಿ ಹೊಣೆಯನ್ನು (Liability) ಕಂಡುಹಿಡಿಯಲು ಪ್ರಾತ್ಯಕ್ಷಿಕ ಮೌಲ್ಯಮಾಪನ (Actuarial Valuation) ಮಾಡಿಸುವ ಅವಶ್ಯಕತೆ ಇರುತ್ತದೆ.

3. ಈ ಸಂಬಂಧ, ಹಾಲಿ ಅಸ್ತಿತ್ವದಲ್ಲಿರುವ ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ಗಳಿಗೆ ಪ್ರಾತ್ಯಕ್ಷಿಕ ಮೌಲ್ಯಮಾಪನ ಸೇವೆಯನ್ನು ಒದಗಿಸುತ್ತಿರುವ ಪ್ರಾತ್ಯಕ್ಷಿಕ ಮೌಲ್ಯಮಾಪಕರಾದ M/s Armstrong International Consultants, Coimbatore ರವರು ಪ್ರೊಫಾರ್ಮ 1 ರಿಂದ 7ರಲ್ಲಿ ಮಾಹಿತಿಗಳನ್ನು ಸಂಗ್ರಹಿಸಲು ಸೂಚಿಸಿರುತ್ತಾರೆ.

4. ಆದ್ದರಿಂದ, ಈ ಪತ್ರಕ್ಕೆ ಲಗತ್ತಿಸಿದ ಪ್ರೊಫಾರ್ಮ 1 ರಿಂದ 7ರಲ್ಲಿ ಲೆಕ್ಕಘಟಕವಾರು ಕ್ರೋಢೀಕರಿಸಿದ ಸಿಬ್ಬಂದಿ/ಪಿಂಚಣಿದಾರರ ಮಾಹಿತಿಯನ್ನು ಈ ಕಛೇರಿಗೆ ಕಳುಹಿಸಲು ಕೋರಿದೆ. ಮುಂದುವರೆದು, ಪ್ರೊಫಾರ್ಮ 1 ರಿಂದ 7ಗಳನ್ನು ನಿಮ್ಮ ಕಂಪನಿಯ ಎಲ್ಲ ಲೆಕ್ಕಘಟಕಗಳು ನಿಗಮ ಕಛೇರಿಗೆ ಸಲ್ಲಿಸಬೇಕಿರುವ ಮಾರ್ಚ್ ಅಂತಿಮ ಲೆಕ್ಕಗಳು 2021ಕ್ಕೆ ಹೆಚ್ಚುವರಿ **"ಅನುಬಂಧ"**ಗಳನ್ನಾಗಿ ನಿಗದಿಪಡಿಸುವುದು. ಪ್ರಾತ್ಯಕ್ಷಿಕ ಮೌಲ್ಯಮಾಪಕರಿಗೆ ಒದಗಿಸುವ ಸಲುವಾಗಿ ನಿಮ್ಮ ಕಂಪನಿಯ ಕ್ರೋಢೀಕೃತ ಪ್ರೊಫಾರ್ಮ 1 ರಿಂದ 7 ತಃಖ್ತೆಗಳನ್ನು ಸಾಫ್ಟ್ ಪ್ರತಿಯಲ್ಲಿ ಮೇ-2021ರ ಮಾಹೆಯಲ್ಲಿ ಈ ಕಛೇರಿಗೆ ಕಳುಹಿಸಲು ವ್ಯವಸ್ಥೆ ಮಾಡುವುದು.

5. IND AS 19ರ ಅವಶ್ಯಕತೆಯಂತೆ ನಿವೃತ್ತಿ ಸೌಲಭ್ಯಗಳ ಹೊಣೆಗಳನ್ನು ಕಂಪನಿಗಳು ಪ್ರಾತ್ಯಕ್ಷಿಕ ಮೌಲ್ಯಮಾಪನದ ಫಲಿತಾಂಶವನ್ನು ಲೆಕ್ಕಪತ್ರಗಳಲ್ಲಿ ಅವಕಾಶ (Provision) ಮಾಡಬೇಕಿರುತ್ತದೆ. ಆದ್ದರಿಂದ, ಮಾಹಿತಿಯನ್ನು ಮೇ-2021ರ ಅಂತ್ಯದೊಳಗೆ ಕಳುಹಿಸಿದ್ದಲ್ಲಿ, ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಯನ್ನು ಶೀಘ್ರವಾಗಿ ಪಡೆದುಕೊಂಡು ಲೆಕ್ಕಪತ್ರಗಳಲ್ಲಿ ಸೂಕ್ತ ಅವಕಾಶ ಮಾಡುವ ಜೊತೆಗೆ, ನಿಗಮ ಮತ್ತು ವಿಸಕಂಗಳಿಂದ ನಿಗದಿತ ದಿನಾಂಕದಲ್ಲಿರುವಂತೆ ಉಪದಾನ ಮತ್ತು ಕುಟುಂಬ ಪಿಂಚಣಿಗೆ ಸಂಬಂಧಿಸಿದಂತೆ, ಮೂಲಧನ ನಿಧಿ (Corpus Fund)ಗಾಗಿ ಬೇಕಾದ ಮೊತ್ತವನ್ನು ಒಂದೇ ಗಂಟಿನಲ್ಲಿ/ಮುಂಗಡವಾಗಿ ಸ್ವೀಕರಿಸುವ ಹಾಗೂ ಕುಟುಂಬ ಪಿಂಚಣಿ ಮತ್ತು ಉಪದಾನ ವಂತಿಗೆ ದರಗಳನ್ನು ಅನುಷ್ಠಾನಗೊಳಿಸುವಂತೆ ಕವಿಪ್ರನಿನಿ/ವಿಸಕಂಗಳಿಗೆ ತಿಳಿಸಲು ಅನುಕೂಲವಾಗುತ್ತದೆ.

6. ಕುಟುಂಬ ಪಿಂಚಣಿ ಮತ್ತು ಉಪದಾನ ಪ್ರಾತ್ಯಕ್ಷಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದ ಪ್ರೊಫಾರ್ಮ 1 ರಿಂದ 7 ರ macros ಅಳವಡಿಸಿದ Excel ಕಡತವನ್ನು ಹಾಗೂ ಸದರಿ ಕಡತವನ್ನು ಭರ್ತಿ ಮಾಡುವ ಸೂಚನೆಗಳನ್ನು ಕವಿಪ್ರನಿನಿಯ ವೆಬ್‌ತಾಣದಲ್ಲಿ ಪ್ರಕಟಿಸಲಾಗಿರುತ್ತದೆ. (path->www.kptcl.com->eprasarana->Administrative-> KPTCL and ESCOMs' Pension & Gratuity Trust->KEPGT Orders/Circulars).

7. ಲೆಕ್ಕಘಟಕಗಳು ಸಲ್ಲಿಸುವ ಸಿಬ್ಬಂದಿ/ಪಿಂಚಣಿದಾರರ ಮಾಹಿತಿಗಳನ್ನು ಕಂಪನಿಗಳ ಸಂಬಂಧಪಟ್ಟ ನಿಗಮ ಕಛೇರಿಗಳಲ್ಲಿ ಕೂಲಂಕುಶವಾಗಿ ಪರಿಶೀಲಿಸಿ ಪಿಂಚಣಿ ಮತ್ತು ಉಪದಾನ ಟ್ರಸ್ಟ್ ಕಛೇರಿಗೆ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಆರ್ಥಿಕ ಸಲಹೆಗಾರರು & ವ್ಯವಸ್ಥಾಪಕ ಟ್ರಸ್ಟಿ(ಪ್ರಭಾರ)
ಕವಿಪ್ರನಿನಿ & ವಿಸಕಂಗಳ ಪಿಂಚಣಿ & ಉಪದಾನ ಟ್ರಸ್ಟ್